ತೋಟದಲ್ಲಿ ಯಾವಾಗಲೂ ಕೆಲಸವಿರುವುದಿಲ್ಲ. ವರ್ಷಕ್ಕೊಮ್ಮೆ ಗೊಬ್ಬರ ಗೋಡು ಹಾಕಿ ಉತ್ತುಬಿಟ್ಟರೆ ತೋಟದ ಕೆಲಸ ಮುಗಿಯಿತು. ಮಳೆಗಾಲವು ಚೆನ್ನಾಗಿಯೇ ಇದ್ದುದರಿಂದ ಬೇಸಿಗೆಯಲ್ಲೂ ನೀರು ಬಿಡುವ ಕೆಲಸವೂ ಇರುತ್ತಿರಲಿಲ್ಲ. ಇನ್ನು ಕಾಯಿ ಕೆಡವುವ ಕೆಲಸ ಹದಿನೈದು ದಿನಕ್ಕೋ ತಿಂಗಳಿಗೋ ಒಮ್ಮೆ ಮಾತ್ರ ಬೆಳೆದ ಕಾಯಿಗಳನ್ನು ಇಳಿಸಿ ತೋಟದ ಮನೆಯಲ್ಲಿ ಕೊಬ್ಬರಿ ಮಾಡಲು ಹಾಕಿದರೆ ತೆಂಗಿನ ತೋಟದ ಕೆಲಸವು ಮುಗಿದೇ ಹೋಗುತ್ತಿತ್ತು. ಉಳಿದಂತೆ ಊರಿನಿಂದ ತುಸು ಹೊರವಲಯದಲ್ಲೆ ಇದ್ದ ತೋಟವೂ ತೋಟದ ಮನೆಯೂ ಅತ್ತ ಯಾರೂ ಸುಳಿಯದೆ ಹಾಳು ಸುರಿದಂತೆ ಇರುತ್ತಿತ್ತು.

ಹಾಗಿರುವಾಗ ಅಂತಹ ಪಾಳುಮನೆಗೆ ಅವಳೊಬ್ಬಳೆ ಯಾಕೆ ಹೋಗಿ ಅಂತರ್ಧಾನಳಾಗುತ್ತಾಳೆ ಎಂದು ಗಮನಿಸುತ್ತಾ ಹೋದಂತೆ ಅವಳೊಬ್ಬಳೆ ಅಲ್ಲ, ಅಲ್ಲೊಬ್ಬ ಗಂಡಸು ಸಹಾ ಇರುತ್ತಾನೆ ಎಂದು ಕಂಡುಕೊಂಡಳಾದರೂ ಅವನು ಯಾರೆಂದು ದೂರದಿಂದ ಹಿಂಬಾಲಿಸುತ್ತಿದ್ದ ರಾಮಕ್ಕನಿಗೆ ಪರಿಚಯ ಸಿಕ್ಕಿರಲಿಲ್ಲ. ಅವನು ಯಾರೇ ಆದರೂ ತನಗೊಂದು ಬಲಿಯು ಸಿಕ್ಕಿತು ಎಂದು ರಾಮಕ್ಕ ರೋಮಾಂಚನಗೊಂಡಳು. ಆ ಗಂಡಸು ಯಾರೇ ಆಗಿರಲಿ ತನ್ನ ಬೇಟೆಯು ಶ್ರೀಮಂತಳಾದ ನಂಜಮ್ಮನೇ ಆಗಿದ್ದುದರಿಂದ ಈ ಬಾರಿ ಒಂದು ಸರಿಯಾದ ಗಿರಾಕಿ ಸಿಕ್ಕಿತೆಂದು ರಾಮಕ್ಕ ಸಂಭ್ರಮಗೊಂಡಳು. ಕೊನೆಗೊಮ್ಮೆ ಬೇಟೆಯಾಡುವ ದಿನ ಬಂದೇಬಿಟ್ಟಿತು.

ಸಾಹುಕಾರ ಶೇಖರಪ್ಪನು ಪೇಟೆಗೆ ಹೋಗಿದ್ದಾನೆಂದು ಖಚಿತ ವರ್ತಮಾನವು ಸಿಕ್ಕದಿನ ಇಟ್ಟಿಗೆ ಭಟ್ಟಿಯ ದೊರೆಸಾಮಿಗೆ ತನಗೆ ಆರೋಗ್ಯ ಸರಿ ಇಲ್ಲ ಎಂದು ನೆಪ ಹೇಳಿ ಅರ್ಧ ದಿನದ ರಜೆ ತೆಗೆದುಕೊಂಡು ಮಧ್ಯಾಹ್ನಕ್ಕೆ ನಂಜಮ್ಮ ತೋಟಕ್ಕೆ ಹೋಗುವ ದಾರಿಯಲ್ಲಿ ಹೊಂಚು ಹಾಕಿಕೊಂಡಿದ್ದಳು. ಕೊನೆಗೂ ಅವಳು ತೋಟದ ಮನೆ ಪ್ರವೇಶಿಸಿದ್ದನ್ನು ದೂರದಿಂದಲೆ ನೋಡಿ ಖಚಿತಪಡಿಸಿಕೊಂಡಳು. ಕೆಲ ಸಮಯಕ್ಕೆ ಜನರಾರೂ ಓಡಾಡದ ತೋಟದ ಮತ್ತೊಂದು ಮಗ್ಗುಲಿನಿಂದ ಗಂಡಸೊಬ್ಬನು ಬಂದು ತೋಟದ ಮನೆ ಪ್ರವೇಶಿಸಿದ್ದನ್ನೂ ನೋಡಿದಳಾದರೂ ದೂರದಿಂದ ನೋಡಿದಾಗ ಸರಿಯಾಗಿ ಅವನ ಗುರುತು ಸಿಕ್ಕಲಿಲ್ಲ, ಆದರೆ ಅವನ ಹಾವಭಾವ ಕಂಡವಳಿಗೆ ಇವನಾರೋ ನಮ್ಮ ಊರಿನವನೆ ಎನ್ನಿಸತೊಡಗಿತು.

ಯಾರಾದರೂ ತಪ್ಪು ಮಾಡಲು ಅವಕಾಶ ಕೊಟ್ಟು ನಂತರ ಅವರನ್ನು ಹಿಡಿದುಹಾಕುವುದು ರಾಮಕ್ಕ ರೂಢಿಸಿಕೊಂಡ ಕೌಶಲವಾಗಿತ್ತು. ಹಾಗಾಗಿ ಒಂದರ್ಧ ಘಂಟೆ ಸಮಯ ಕಳೆದ ನಂತರವೆ ರಾಮಕ್ಕ ತೋಟದ ಮನೆಯ ಬಾಗಿಲು ತಟ್ಟಿದಳು. ಕೆಲವು ಬಾರಿ ಬಾಗಿಲು ತಟ್ಟಿದ ಮೇಲೆ ನಂಜಮ್ಮನೆ ಬಾಗಿಲನ್ನು ತೆರೆದು ರಾಮಕ್ಕನನ್ನು ಕಂಡು ಕೋಪವನ್ನು ಪ್ರಕಟಿಸುತ್ತಾ 'ಬ್ಯಾವರ್ಸಿ ನೀನ್ಯಾಕೆ ಇಲ್ಲಿ ಬಂದೆ? ನಿನಗೇನು ಕೆಲಸ?' ಎಂದು ಬೈಯತೊಡಗಿದಳು. ಅವಳ ಬೈಗುಳಕ್ಕೆ ಬೆಲೆ ಕೊಡದ ರಾಮಕ್ಕನು 'ಒಳಗೆ ಯಾರೋ ಗಂಡಸಿದ್ದಂಗದೆ' ಎಂದಳು. 'ಗಂಡಸು ಯಾವನು ಬಂದಾನು? ನಾನು ತೆಂಗಿನ ಕಾಯಿ ಲೆಕ್ಕ ಮಾಡಲು ಬಂದೆ. ಬಿಕನಾಸಿ ನಿನ್ನನ್ಯಾರು ಕರೆದಿದ್ರು ಇಲ್ಲಿಗೆ? ನಡಿ ಇಲ್ಲಿಂದ' ಎಂದು ಕೋಪಗೊಳ್ಳುತ್ತಾ ಅವಳನ್ನು ಓಡಿಸಲು ನೋಡಿದಳು.

ಆದರೆ, ರಾಮಕ್ಕ ಅಂತಹ ಬೈಗುಳಕ್ಕೆ ಜಗ್ಗುವ ಪೈಕಿಯಲ್ಲವಲ್ಲ. 'ಒಳಗೆ ಯಾವನೋ ಇದ್ದಾನೆ ಅಂತ ನಂಗೆ ಗೊತ್ತದೆ. ನನ್ನ ಎದುರು ಹಾಕ್ಕಂಡ್ರೆ ಏನಾದದು ಗೊತ್ತ? ಊರಿಗೆಲ್ಲ ಪ್ರಚಾರ ಮಾಡಿಬಿಟ್ಟೇನು' ಎಂದು ಹೆದರಿಸಲು ನೋಡಿದಳು. ಆ ಮಾತನ್ನು ಕೇಳಿದ ನಂಜಮ್ಮನು ಮತ್ತೇನೂ ಯೋಚಿಸದೆ 'ಒಳಗೆ ಯಾವನು ಇದ್ದಾನೆ ಅಂತ ನಿನಗೆ ಗೊತ್ತಾಗಬೇಕು ತಾನೆ? ಇರು ಯಾರು ಅಂತ ತೋರಿಸಿಯೇನು' ಎನ್ನುತ್ತಾ ಒಳಗೆ ಹೋಗಿ ಜೊತೆಯಲ್ಲಿದ್ದ ಗಂಡಸಿನ ಕಾಲರ್ ಹಿಡಿದು ಹೊರಗೆ ತಂದು ರಾಮಕ್ಕನ ಎದುರು ನಿಲ್ಲಿಸಿ 'ನೋಡಿಕೋ ನೋಡಿಕೋ ಯಾವ ಊರಲ್ಲಿ ಪ್ರಚಾರ ಮಾಡುತೀಯೋ ಮಾಡಿಕೋ ಮರ್ಯಾದೆ ಯಾರದ್ದು ಹೋಗುತ್ತದೋ ನೋಡೋಣ' ಎಂದಳು. ಬೆಚ್ಚಿಬೀಳುವ ಸರದಿ ರಾಮಕ್ಕನದ್ದಾಗಿತ್ತು. ಅದು... ಅದು ರಾಮಕ್ಕನ ಗಂಡನೇ ಆಗಿದ್ದ!

ಆಮೇಲಿನ ದಿನಗಳಲ್ಲಿ ರಾಮಕ್ಕನ ನವೋದ್ಯಮವು ಬರಖಾಸ್ತಾಯಿತು ಮತ್ತು ಅವಳು ಇಟ್ಟಿಗೆ ಭಟ್ಟಿಯ ಸಂಬಳದಲ್ಲೆ ಬಡತನದ ಜೀವನ ಮಾಡಬೇಕಾದ ಅನಿವಾರ್ಯತೆಗೆ ಸಿಕ್ಕಿಕೊಂಡಳು.

●